**PW_**11

**1** ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,
ಚಿತ್ರದುರ್ಗ
ಸಿ.ಸಿ.**2350/2021**

| | | |
|---|---|---|
| ಸಾಕ್ಷಿದಾರರ ಹೆಸರು | - ಕೆ ಎಸ್ ಶಂಕರಯ್ಯ | PW:11 |
| ತಂದೆ ಹೆಸರು | - ಲೇಟ್ ಟಿ ಕೆಂಗಪ್ಪ | CW:34 |
| ವಯಸ್ಸು | - 73 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - ನಿವೃತ್ತ ಪೊಲೀಸ್ ಉಪನಿರೀಕ್ಷಕರು | ದಿ: 16/07/2026 |
| ವಾಸ | - ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ದಿಃ02.03.2009 ರಿಂದ 02.09.2012 ರವರೆಗೆ ನಾನು ಚಿತ್ರದುರ್ಗ ನಗರ ಠಾಣೆಯಲ್ಲಿ ಉಪನಿರೀಕ್ಷಕರಾಗಿ ಕಾರ್ಯ ನಿರ್ವಹಿಸುತಿದ್ದೆ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ29.02.2012 ರಂದು ಚಾಸಾ.35 ರವರ ನಿರ್ದೇಶನದ ಮೇರೆಗೆ 5 ನೇ ಆರೋಪಿ ವಾಸವಿದ್ದ ಎಂದು ಹೇಳುವ ಬೆಂಗಳೂರಿನ ವಾಸದ ಮನೆ ಜಪ್ತು ಕಾರ್ಯಕ್ಕೆ ಸಿಬ್ಬಂದಿಗಳನ್ನು ನನ್ನ ಜೊತೆ ನೇಮಿಸಿದ್ದು ಹೋಗಿದ್ದು 5 ನೇ ಆರೋಪಿ ಜೊತೆ ಆತನ ವಾಸದ ಮನೆ ಬಳಿ ಹೋಗಿದ್ದೆ. ಸ್ತಳಕ್ಕೆ ಚಾಸಾ.8 ಮತ್ತು 9 ರವರುಗಳನ್ನು ಪಂಚರಾಗಿ ಬರಮಾಡಿಕೊಂಡು 5 ನೇ ಆರೋಪಿ ಸಮಕ್ಷಮ ಪಂಚರುಗಳು ಸಮಕ್ಷಮ ಸ್ತಳದಲ್ಲಿ 4.45 ರಿಂದ 6.45 ರವರೆಗೆ ಸ್ತಳ ಪಂಚನಾಮೆ ಜರುಗಿಸಿದ್ದೆ ಸದರಿ ಸ್ತಳಪಂಚನಾಮೆ ಯನ್ನು ಸಾಕ್ಷಿ ಗುರುತಿಸಿದ್ದು ಈಗಾಗಲೇ ನಿಪಿ.118 ಎಂದು ಗುರುತಿಸಿದ್ದು ಸಾಕ್ಷಿಯ ಸಹಿ ನಿಪಿ.118(ಎ) ಎಂದು ಗುರುತಿಸಲಾಯಿತು. ಮನೆ ಜಪ್ತಿಗೆ ಸಂಬಂದಿಸಿದಂತೆ ಸರ್ಚ್ ಲಿಸ್ಟ ಪಡೆದಿದ್ದು ಸಾಕ್ಷಿ ಗುರುತಿಸಿದ್ದು ಈಗಾಗಲೇ ನಿಪಿ.119

ಎಂದು ಗುರುತಿಸಿದ್ದು, ಸಾಕ್ಷಿ ನಿಪಿ.119 (ಎ) ಎಂದು ಗುರುತಿಸಲಾಯಿತು. ಅದೇ ದಿನ 5 ನೇ ಆರೋಪಿ ಜೊತೆ ಠಾಣೆಗೆ ವಾಪಸ್ಸಾಗಿ ಚಾಸಾ.35 ರವರ ಸಮಕ್ಷಮ ವರದಿ ನೀಡಿದ್ದೆ. 5 ನೇ ಆರೋಪಿಯನ್ನು ಸಾಕ್ಷಿ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು 5 ನೇ ಆರೋಪಿಯ ಪರ ಶ್ರೀಮತಿ ಡಿ ಕೆ ಎಸ್ ವಕೀಲರಿಂದಃ</u>**

2. 5 ನೇ ಆರೋಪಿಗೆ ಸೇರಿದ ಮನೆ ಜಪ್ತು ಮಾಡುವ ಸಂಬಂದ ಚಾಸಾ.35 ಲಿಖಿತ ಆದೇಶ ನೀಡಿದ್ದರು. ದಿಃ29.02.2012 ಪಂಚನಾಮೆ ಕಾಲಕ್ಕೆ 5 ನೇ ಆರೋಪಿ ಆರೋಪಿತನಾಗಿ ಕಾಣಿಸಿರಲಿಲ್ಲ ಎಂದರೆ ಸಾಕ್ಷಿ ಪೊಲೀಸರ ವಶದಲ್ಲಿ ಇದ್ದರು ಎಂದು ಉತ್ತರಿಸುತ್ತಾರೆ. 5 ನೇ ಆರೋಪಿ ವಿರುದ್ದ 2 ನೇ ಬಾರಿ ಪ್ರ ವ ವರದಿ ತಯಾರು ಮಾಡಿದ್ದರಾ ಇಲ್ಲವಾ ನನಗೆ ಮಾಹಿತಿ ಇಲ್ಲ. ನಿಪಿ.118 ರ ಕಾಲಕ್ಕೆ 5 ನೇ ಆರೋಪಿಯನ್ನು ಆರೋಪಿ ಎಂದು ಈ ಪ್ರಕರಣದಲ್ಲಿ ಕಾಣಿಸಿರಲಿಲ್ಲ ಕಾರಣ ಆರೋಪಿಯನ್ನಾಗಿ ಪರಿಗಣಿಸಿ ಆತನ ಮನೆಯನ್ನು ಜಪ್ತು ಮಾಡುವ ಅದಿಕಾರ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. 5 ನೇ ಆರೋಪಿಯ ಮನೆ ಜಪ್ತು ಕಾಲಕ್ಕೆ ಯಾವುದೇ ಒಡವೆಗಳು, ನಗದು ಹಣ , ದಾಖಲೆ ಪುರಾವೆಗಳು ಸಿಕ್ಕಿರಲಿಲ್ಲ ಎಂದರೆ ಸರಿ.

3. ನಾನು ಜಪ್ತು ಮಾಡಿದ ಮನೆ , ನಿಪಿ.118 ರಡಿ ಕಾಣಿಸಿರುವ ಮನೆ 5 ನೇ ಆರೋಪಿಗೆ ಸೇರಿದ್ದಾ ಅಥವಾ ಯಾರಿಗೆ ಸೇರಿದ್ದು ಎಂಬ ಬಗ್ಗೆ ಜಪ್ತು ಕಾಲಕ್ಕೆ ದಾಖಲೆ ಪಡೆದುಕೊಂಡಿಲ್ಲ . ಸದರಿ ಮನೆಯ ಮಾಲೀಕ ಯಾರು ಎಂದು ನಾನು ವಿಚಾರಣೆ ಮಾಡಿಲ್ಲ ಮತ್ತು ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ. ಸದರಿ ಮನೆ 5 ನೇ ಆರೋಪಿಗೆ ಸೇರಿದ್ದು ಎಂಬ ಬಗ್ಗೆ ನಾನು ನಿಖರವಾಗಿ ಮಾಹಿತಿ ಪಡೆಯದೆ ನಿಪಿ.118 ರಡಿ ಸುಳ್ಳು ಮಾಹಿತಿ ಪಡೆದು ಸುಳ್ಳು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಇತರೆ ಆರೋಪಿಗಳ ಪರ ವಕೀಲರುಗಳು ಪಾಟೀಸವಾಲು ಇಲ್ಲ ಎಂದು**

**PW_11**

**ಹೇಳಿದ್ದು ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**